ನಿಮ್ಮ ಪುಟ

# ಊಸರವಳ್ಳಿಯ ಫೋಟೊ ಸೆಷನ್



ಚಿತ್ರದಲ್ಲಿ ಕಾಣುತ್ತಿರುವುದು ಗೋಸುಂಬೆ ಅಲಿಯಾಸ್ 'ಊಸರವಳ್ಳಿ'. 'Chamaeleonidac' ಎಂಬ ಪ್ರಭೇಧಕ್ಕೆ ಸೇರುವ ಈ ಊಸರವಳ್ಳಿಗೆ ಆಂಗ್ಲಭಾಷೆಯಲ್ಲಿ ಕೆಮಿಲಿಯನ್ (Chameleons) ಎಂದು ಕರೆಯುತ್ತಾರೆ. ಹಲ್ಲಿಗಳ ಜಾತಿಗೆ ಸೇರುವ ಈ 'ಊಸರವಳ್ಳಿ'ಯನ್ನು ಹಳೇ ವಿಶ್ವದ ಹಲ್ಲಿಗಳೆಂದರೆ ತಪ್ಪಾಗಲಾರದು. ಈವರೆಗೆ 215 ಪ್ರಭೇಧಗಳನ್ನು ಗುರುತಿಸುತ್ತಾರೆ. 'ಉರಗವರ್ಗ' ಎಂತಲೂ ಕರೆಸಿಕೊಳ್ಳುವ ಇದು, ನಾಲಿಗೆಯನ್ನು ಉದ್ದವಾಗಿ ಚಾಚಬಲ್ಲದು. ಬಾಲವನ್ನು ಮರದ ಕೊಂಬೆಗೆ ಸುತ್ತಿ ಹಿಡಿದುಕೊಂಡು ಕೊಂಬೆಯಿಂದ ಕೊಂಬೆಗೆ ಸಾಗುತ್ತದೆ. ವಾತಾವರಣಕ್ಕೆ ತಕ್ಕಂತೆ ತನ್ನ ಬಣ್ಣವನ್ನು ಬದಲಾಯಿಸುವ ವಿಶೇಷ ಸಾಮರ್ಥ್ಯವನ್ನೂ ಹೊಂದಿದೆ. ಆಹಾರವಿಲ್ಲದೆ ದೀರ್ಘ ಸಮಯ ಬದುಕುವ, ಶೀತ ವಲಯ, ಉಷ್ಣವಲಯವಲ್ಲದ ಸಮಶೀತೋಷ್ಣ ವಲಯದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆಫ್ರಿಕಾ ಕಾಡುಗಳಲ್ಲಿ, ಮಡಗಾಸ್ಕರ್, ದಕ್ಷಿಣ ಐರೋಪ್ಯ, ದಕ್ಷಿಣ ಏಷ್ಯಾ, ಶ್ರೀಲಂಕಾದಲ್ಲಿ ಹೆಚ್ಚು ಕಂಡುಬರುತ್ತದೆ. ವಾಯು ವಿಹಾರಕ್ಕೆ ಹೋದಾಗ ಕಣ್ಣಿಗೆ ಕಂಡ ಇದನ್ನು ಅಳಿಯ ಎನ್.ಎಸ್. ರಾಜು ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದರು.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

# ಬಿದಿರಿನ ಡಸ್ಟ್‌ಬಿನ್

ಡಸ್ಟ್‌ಬಿನ್‌ಗಳು ಈಚೆಗೆ ನಾನಾ ಸ್ವರೂಪ ಪಡೆದುಕೊಂಡಿವೆ. ಈ ಚಿತ್ರದಲ್ಲಿ ಕಾಣುವುದೂ ಡಸ್ಟ್‌ಬಿನ್. ಆದರೆ ಈಗಿನ ಕಾಲದ್ದಲ್ಲ. ಹಳೆಯ ಕಾಲದ್ದು. ವಿಶೇಷ ಎಂದರೆ ಬಿದಿರಿನಿಂದ ರಚಿತವಾದದ್ದು. ಬಾಗಲಕೋಟೆ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 50ರ ಕೂಡಲಸಂಗಮ ಕ್ರಾಸ್ ಬಳಿ ಇರುವ ಡಾಬಾವೊಂದರಲ್ಲಿ ಇದು ಬಳಕೆಯಲ್ಲಿದೆ. ಡಾಬಾಗೆ ಹಳೆಯ ಕಾಲದ ಸ್ಪರ್ಶ ನೀಡಲೆಂದು ಇದನ್ನು ಬಳಸಲಾಗುತ್ತಿದೆ. ಡಾಬಾಗೆ ಬರುವ ಗ್ರಾಹಕರು ಗೀಚಿದ ಬೆಂಕಿಕಡ್ಡಿ, ಸಿಗರೇಟ್ ಸೇದಿ ಉಳಿದ ಶೇಷಭಾಗವನ್ನು ಇದರಲ್ಲಿ ಒಗೆಯುತ್ತಿದ್ದಾರೆ. ಬಿದಿರನ್ನು ಅನುಕೂಲಕ್ಕೆ ತಕ್ಕಂತೆ ಕತ್ತರಿಸಿ ಡಸ್ಟ್‌ಬಿನ್ ರೂಪ ನೀಡಿ ಅದಕ್ಕೆ ಸುಂದರ ಬಣ್ಣ ಬಳಿದು ಡಾಬಾ, ಹೋಟೆಲ್ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ತೂಗು ಹಾಕಬಹುದು. ಅಲ್ಲದೆ ಮನೆಗಳಲ್ಲೂ ಇದನ್ನು ಬಳಸಬಹುದು.

—ಮನಿಷಾ ಪಾಟೀಲ, ವಿಜಯಪುರ






# 'ಶಿವನಪಾದ'ಕ್ಕೆ ಸ್ವಾಗತ!

ಕೆಲವೊಂದಿಷ್ಟು ಊರುಗಳ ಹೆಸರು ಬಹಳ ಸ್ವಾರಸ್ಯಕರವಾಗಿರುತ್ತವೆ. ಅವು ಒಂದಕ್ಕಿಂತ ಒಂದು ಮಿಗಿಲು. ತನ್ನ ಹೆಸರಿನಿಂದಲೇ ಅವು ಖ್ಯಾತಿ, ಕುಖ್ಯಾತಿ, ವ್ಯಂಗ್ಯಕ್ಕೆ ಹೆಸರುವಾಸಿಯಾಗಿ ಎಲ್ಲರ ಮನದಲ್ಲಿ ಹಾಗೇ ಕೂತುಬಿಡುತ್ತವೆ. ಅಂತಹುದೇ ಹೆಸರು 'ಶಿವನಪಾದ'. ಇದು ಕರ್ನಾಟಕದ ಒಂದು ಗ್ರಾಮದ ಹೆಸರು. ರಾಜ್ಯ ಹೆದ್ದಾರಿಯ ಬದಿಯಲ್ಲಿ ಕಿಲೋಮೀಟರ್ ಸೂಚಿಸುವ ಕಲ್ಲೊಂದನ್ನು ಹಾಕಲಾಗಿದ್ದು, ಅದರಲ್ಲಿ 'ಎಸ್‌ಎಚ್.62, ಶಿವನಪಾದ 8 ಕಿಮೀ. ಅಂತ ಬರೆಯಲಾಗಿದೆ. ಈ ಮಾರ್ಗವಾಗಿ ಸಾಗುವವರು ಇದನ್ನು ಓದಿ ನಗೆಗಡಲಲ್ಲಿ ತೇಲುವುದಂತೂ ಗ್ಯಾರಂಟಿ.

ಸಾಮಾನ್ಯವಾಗಿ 'ಶಿವನಪಾದ' ಎಂಬ ಪದವನ್ನು ವ್ಯಕ್ತಿಯೊಬ್ಬರು ಸತ್ತಿದ್ದಾರೆ ಎಂಬುದರ ಅನ್ವರ್ಥವಾಗಿ ಸಂಭೋದಿಸಲು ಬಳಸಲಾಗುತ್ತದೆ. ಉದಾಹರಣೆ 'ಓ ಅವನಾ. ಅವನು ಯಾವಾಗಲೋ 'ಶಿವನಪಾದ' ಸೇರಿದ ಅಂತ ಹೇಳುವುದುಂಟು. ಇಂತಹ ಅರ್ಥ ಕೊಡುವ ಪದವು ಗ್ರಾಮವೊಂದರ ಹೆಸರಾಗಿರುವುದು ಎಲ್ಲರ ನೋಟವೂ ವ್ಯಂಗ್ಯಕ್ಕೆ ತಿರುಗುವಂತೆ ಮಾಡಿದೆ. ಇದನ್ನು ಓದುವ ಪ್ರತಿಯೊಬ್ಬರ ಮೊಗದಲ್ಲೂ ನಗು ಉಕ್ಕದೇ ಇರದು. ಈ ಊರಿಗೆ ಶಿವನಪಾದ ಅನ್ನುವ ಹೆಸರು ಹೇಗೆ ಬಂತೋ ಗೊತ್ತಿಲ್ಲ. ಕಿರಿಕಿರಿ, ನಗೆಯುಕ್ಕಿಸುವಂತಹ ಹೆಸರನ್ನು ತಮ್ಮೂರಿಗೆ ಇರುವುದರಿಂದ ಅವರು ಅದನ್ನು ಹೇಗೆ ನಿಭಾಯಿಸುತ್ತಾರೋ ತಿಳಿಯದು.

—ಯು.ಜೆ. ಕುಲಕರ್ಣಿ, ಬಾಗಲಕೋಟೆ

